# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು – 560 002.**

ಸಂಖ್ಯೆ: ಬಿ12(1)/ಪಿಆರ್/394./ 2012-13 ದಿನಾಂಕ: 12-03-2013

## ಕಛೇರಿ ಆದೇಶ

ವಿಷಯ: ನಕ್ಷೆ ಮಂಜೂರಾತಿ ಅಧಿಕಾರ ಪ್ರತ್ಯಾಯೋಜನೆ ಮಾಡುವ ಕುರಿತು.

ಉಲ್ಲೇಖ: 1) ಆಯುಕ್ತರವರ ನಡವಳಿ ದಿನಾಂಕ: 07-09-2012
2) ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಬಿ12(1)/ಪಿಆರ್/394/2012-13, ದಿನಾಂಕ: 01-01-2013

*******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಶಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಉಲ್ಲೇಖ (1) ದಿನಾಂಕ: 07-09-2012 ರ ನಡವಳಿಯನ್ವಯ ಜಂಟಿ ನಿರ್ದೇಶಕರು (ನಗರ ಯೋಜನೆ - ಸ್ಕ್ವಾಡ್) ರವರಿಗೆ ಕೇಂದ್ರ ಕಛೇರಿಯಲ್ಲಿ ನೀಡುವಂತಹ ನಕ್ಷೆ ಮಂಜೂರಾತಿ ಪ್ರಕರಣಗಳಿಗೆ ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ, ವಲಯ ಮತ್ತು ಕೇಂದ್ರ ಕಛೇರಿಯಲ್ಲಿ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣಪತ್ರ ನೀಡಿದ ನಂತರ ಪರಿವೀಕ್ಷಣೆ ಮತ್ತು ಉಸ್ತುವಾರಿ ಮಾಡುವ, ಕಟ್ಟಡಗಳಲ್ಲಿನ ಉಲ್ಲಂಘನೆಗಳಿಗೆ ಕ್ರಮ ವಹಿಸುವ ಹಾಗೂ ಆಯುಕ್ತರವರು ಸೂಚಿಸಿರುವ ಇತರೇ ಯಾವುದೇ ಕಾರ್ಯಗಳನ್ನು ನಿರ್ವಹಿಸುವುದನ್ನು ವಿವರಿಸಿ, ಇದರಿಂದಾಗಿ ಜಂಟಿ ನಿರ್ದೇಶಕರು (ನಗರ ಯೋಜನೆ - ಸ್ಕ್ವಾಡ್) ರವರ ಅಧೀನದಲ್ಲಿ ಎರಡು ಹೆಚ್ಚುವರಿ ಉಪ ನಿರ್ದೇಶಕರ ಹುದ್ದೆಗಳನ್ನು ಸೃಜಿಸಿ ಸದರಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ತೀರ್ಮಾನಿಸಿ ಆದೇಶಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಾತ್ಮಕ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಕಛೇರಿ ಆದೇಶ ಸಂಖ್ಯೆಳ ಬಿ12(1)/ಪಿಆರ್/433/2012-13, ದಿನಾಂಕ: 06-11-2012 ಮತ್ತು ಕಛೇರಿ ಆದೇಶ ಸಂಖ್ಯೆ: ಬಿ12(1)/ಪಿಆರ್/394/06-07/2012-13, ದಿನಾಂಕ: 07-12-2012 ಇವುಗಳನ್ನು ನಿಲಂಬನೆಗೊಳಿಸಿ ಈ ಆದೇಶಗಳಿಗಿಂತ ಮುಂಚಿತವಾಗಿ ಜಾರಿಯಲ್ಲಿದ್ದಂತಹ ನಕ್ಷೆ ಮಂಜೂರಾತಿ ಅಧಿಕಾರ ಪ್ರತ್ಯಾಯೋಜನೆಯ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವಂತೆ ಉಲ್ಲೇಖ (2) ರಲ್ಲಿ ಆದೇಶಿಸಲಾಗಿರುತ್ತದೆ.

ಕೇಂದ್ರ ಕಛೇರಿಯ ಜಂಟಿ ನಿರ್ದೇಶಕರು (ನಗರ ಯೋಜನೆ - ಉತ್ತರ ಮತ್ತು ದಕ್ಷಿಣ) ರವರ ಕಛೇರಿಯಲ್ಲಿ ನೀಡುವಂತಹ ನಕ್ಷೆ ಮಂಜೂರಾತಿಯ ಅನೇಕ ಪ್ರಕರಣಗಳಲ್ಲಿ ಪ್ರಾರಂಭಿಕ ಪ್ರಮಾಣಪತ್ರ ಪಡೆದ ನಂತರ ಪರಿಷ್ಕೃತ ನಕ್ಷೆ ಮಂಜೂರಾತಿಗೆ ಅರ್ಜಿಗಳು ಸ್ವೀಕರಿಸಲಾಗುತ್ತಿರುತ್ತದೆ. ಹಾಗಾಗಿ ಉಲ್ಲೇಖ (1) ರಲ್ಲಿ ಪ್ರತ್ಯಾಯೋಜಿಸಿರುವಂತೆ ಪ್ರಾರಂಭಿಕ ಪ್ರಮಾಣಪತ್ರಕ್ಕಾಗಿ ಜಂಟಿ ನಿರ್ದೇಶಕರು (ನಗರ ಯೋಜನೆ - ಸ್ಕ್ವಾಡ್) ರವರಿಗೆ ಮೂಲ ಕಡತ ಕಳುಹಿಸಿರುವುದನ್ನು ಮತ್ತೆ ಹಿಂದಕ್ಕೆ ಪಡೆದ ನಂತರ ಪರಿಷ್ಕೃತ ನಕ್ಷೆ ಮಂಜೂರಾತಿ ಪ್ರಕ್ರಿಯೆಯನ್ನು ಪರಿಶೀಲಿಸಬೇಕಾಗಿರುವುದರಿಂದ, ಪರಿಷ್ಕೃತ ನಕ್ಷೆ ಮಂಜೂರಾತಿ ನೀಡುವಲ್ಲಿ ವ್ಯತ್ಯಯ ಉಂಟಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಅಲ್ಲದೇ, ಈ ಹಿಂದೆ ಇದ್ದಂತಹ ಪದ್ಧತಿಯಂತೆ ಆಯಾ ನಕ್ಷೆ ಮಂಜೂರಾತಿ ನೀಡುವ ಪ್ರಾಧಿಕಾರಗಳೇ ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಪ್ರಕ್ರಿಯೆಗಳನ್ನು ಪರಿಶೀಲಿಸಿ ಮಂಡಿಸಿದ್ದಲ್ಲಿ ಎಲ್ಲಾ ಹಂತದ ಅನುಮೋದನೆ ನೀಡುವ ಪ್ರಕ್ರಿಯೆಯಲ್ಲಿ ವ್ಯತ್ಯಯ ಉಂಟಾಗದೆ ತ್ವರಿತಗತಿಯಲ್ಲಿ ನಕ್ಷೆ ಮಂಜೂರಾತಿ ನೀಡಬಹುದಾಗಿದ್ದು, ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆಯೆಂದು ಅಭಿಪ್ರಾಯಿಸಲಾಗಿದೆ.

Office of the I T A ... sor
No. 1138
Date. 14/3
Bangalore Mahanagara Palike

ನೀಡುವ ಪ್ರಕ್ರಿಯೆಯನ್ನು ಮ್ಯಾನ್ಯುಯಲ್ ಆಗಿ ಪರಿಶೀಲಿಸಿ ಅನುಮೋದನೆ ನೀಡುವ ಪ್ರಕ್ರಿಯೆ ಪ್ರಸ್ತುತ ಜಾರಿಯಲ್ಲಿರುತ್ತದೆ. ಆದರೆ ಮ್ಯಾನ್ಯುಯಲ್ ಆಗಿ ಅನುಮೋದನೆಗೊಂಡ ಅಭಿವೃದ್ಧಿ ನಕ್ಷೆಗಳಿಗೆ ಪರವಾನಿಗೆ ನೀಡಲು ಆನ್‌ಲೈನ್ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪರಿಶೀಲಿಸಿದಾಗ ಹಲವಾರು ತಾಂತ್ರಿಕ ತೊಡಕುಗಳು ಉಂಟಾಗುತ್ತಿರುತ್ತದೆ. ಹಾಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ಎಲ್ಲಾ ಪ್ರಕ್ರಿಯೆಗಳಿಗೆ ಆನ್‌ಲೈನ್ ಮೂಲಕ ನಕ್ಷೆ ಮಂಜೂರಾತಿ ನೀಡಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದು, ವಿಳಂಬಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ವಸತಿ ಮತ್ತು ವಸತಿಯೇತರ ಕಟ್ಟಡಗಳ ಎಲ್ಲಾ ಅಭಿವೃದ್ಧಿ ಯೋಜನಾ ನಕ್ಷೆಗಳಿಗೆ ಸಂಬಂಧಿಸಿದಂತೆ ಪಾಲಿಕೆಯಲ್ಲಿ ಮಂಜೂರಾತಿ ನೀಡುವ ಪ್ರಕ್ರಿಯೆಯನ್ನು ಕೇಂದ್ರ ಕಛೇರಿಯಲ್ಲಿ ಮ್ಯಾನ್ಯುಯಲ್ ಪದ್ಧತಿಯಲ್ಲಿ ಪರಿಶೀಲಿಸಿ ಮಂಡಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ.

ಮೇಲೆ ವಿವರಿಸಿರುವ ಕಾರಣಗಳಿಂದ ವಲಯ ಕಛೇರಿಗಳಿಗೆ ನಕ್ಷೆ ಮಂಜೂರಾತಿ ನೀಡುವ ಮತ್ತು ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರಿಗೆ ಅಧಿಕಾರ ಪ್ರತ್ಯಾಯೋಜಿಸಿರುವುದನ್ನು ಮಾರ್ಪಡಿಸಿ ಪಾಲಿಕೆಯ ಆಡಳಿತಾತ್ಮಕ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಈ ಕೆಳಕಂಡಂತೆ ವಲಯ ಅಪರ / ಜಂಟಿ ಆಯುಕ್ತರು, ಅಪರ ನಿರ್ದೇಶಕರು (ನಗರ ಯೋಜನೆ) ಮತ್ತು ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿರುತ್ತೇನೆ. ಈ ಅಧಿಕಾರಗಳು ಮುಂದೆ ಪರಿಷ್ಕರಿಸುವ, ಹಿಂತೆಗೆದುಕೊಳ್ಳುವ ಮತ್ತು ಮಾರ್ಪಾಡು ಮಾಡುವವರೆವಿಗೂ ಜಾರಿಯಲ್ಲಿರುತ್ತದೆ.

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ಎಲ್ಲಾ ಅಭಿವೃದ್ಧಿ ಯೋಜನಾ ನಕ್ಷೆಗಳಿಗೆ ಮಂಜೂರಾತಿ ನೀಡುವುದನ್ನು ಹೊರತುಪಡಿಸಿ ಒಂದು ತಳ + ನೆಲ + ಮೇಲಿನ ಮೂರು ಅಂತಸ್ತುಗಳಿಗೆ (ಮೆಜನೈನ್ ಸೇರಿಸಿ) 15.00 ಮೀ. ಎತ್ತರದವರೆಗಿನ ಎಲ್ಲಾ ಉಪಯೋಗದ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ಅನುಮೋದನೆ ನೀಡುವ ಅಧಿಕಾರವನ್ನು ವಲಯ ಜಂಟಿ / ಅಪರ ಆಯುಕ್ತರವರುಗಳಿಗೆ ಪ್ರತ್ಯಾಯೋಜಿಸಲಾಗಿದೆ.

2. ಮೇಲಂತಸ್ತುಗಳನ್ನು ಲೆಕ್ಕಿಸದೇ ಎರಡು ಮತ್ತು ಎರಡಕ್ಕಿಂತ ಹೆಚ್ಚಿನ ತಳ ಅಂತಸ್ತುಗಳ ಮತ್ತು ಮೇಲಿನ ನಾಲ್ಕು ಮತ್ತು ಅದಕ್ಕಿಂತ ಹೆಚ್ಚಿನ ಅಂತಸ್ತುಗಳಿರುವ ಎಲ್ಲಾ ಉಪಯೋಗದ ಕಟ್ಟಡಗಳಿಗೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ಅಭಿವೃದ್ಧಿ ಯೋಜನಾ ನಕ್ಷೆಗಳ ಎಲ್ಲಾ ಉಪಯೋಗದ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಪ್ರಕರಣಗಳಿಗೆ ಕೇಂದ್ರ ಕಛೇರಿಯ ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ ಮತ್ತು ದಕ್ಷಿಣ) ರವರುಗಳು ಅಪರ ನಿರ್ದೇಶಕರು (ನಗರ ಯೋಜನೆ), ಪ್ರಧಾನ ಅಭಿಯಂತರರು ಹಾಗೂ ವಿಶೇಷ ಆಯುಕ್ತರು (ಯೋಜನೆ) ರವರ ಮುಖೇನ ಮಾನ್ಯ ಆಯುಕ್ತರವರಿಗೆ ಅನುಮೋದನೆಗಾಗಿ ಮಂಡಿಸಲು ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಮುಂದುವರೆದು, ಸದರಿ ನಕ್ಷೆ ಮಂಜೂರಾತಿಗಳಿಗೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಕರಣಗಳನ್ನು ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ ಮತ್ತು ದಕ್ಷಿಣ) ರವರು ಪರಿಶೀಲಿಸಿ ಶಿಫಾರಸ್ಸಿನೊಂದಿಗೆ ಅನುಮೋದನೆಗಾಗಿ ಅಪರ ನಿರ್ದೇಶಕರು (ನಗರ ಯೋಜನೆ) ರವರಿಗೆ ಮಂಡಿಸಲು ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

3. ವಲಯ ಮತ್ತು ಕೇಂದ್ರ ಕಛೇರಿಯಲ್ಲಿ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡಿದ ನಂತರ ಪರಿವೀಕ್ಷಣೆ ಮತ್ತು ಉಸ್ತುವಾರಿ ಮಾಡುವ, ಕಟ್ಟಡಗಳಲ್ಲಿನ ಉಲ್ಲಂಘನೆಗಳಿಗೆ ಕ್ರಮ ವಹಿಸುವ ಹಾಗೂ ಆಯುಕ್ತರವರು ಸೂಚಿಸುವ ಇತರೇ ಯಾವುದೇ

ರವರಿಗೆ ಪ್ರತ್ಯಾಯೋಜಿಸಲಾಗಿದೆ.

4. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ಅಭಿವೃದ್ಧಿ ಯೋಜನಾ ನಕ್ಷೆಗಳ ಪ್ರಕರಣಗಳ ಎಲ್ಲಾ ಉಪಯೋಗದ ಕಟ್ಟಡಗಳ ನಕ್ಷೆಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸಿ ಮ್ಯಾನ್ಯುಯಲ್ ಪದ್ಧತಿಯಲ್ಲಿ ಪರಿಶೀಲಿಸಿ ಅನುಮೋದನೆಗೆ ಮಂಡಿಸಲು ಅನುಮತಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಪ್ರಕ್ರಿಯೆಗಳಲ್ಲಿ ಕ್ರಮ ಕೈಗೊಳ್ಳುವಾಗ ಸರ್ಕಾರದಿಂದ ಅನುಮೋದಿತಗೊಂಡಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್ – 2015 ರ ವಲಯ ನಿಯಮಾವಳಿಗಳು, ಕಟ್ಟಡ ಉಪವಿಧಿಗಳು, ಕಟ್ಟಡಗಳಿಗೆ ಅನುಮೋದನೆ ನೀಡುವಾಗ ವಿಧಿಸಲಾದ ನಿಬಂಧನೆಗಳನ್ನು ಹಾಗೂ ಸಂಬಂಧಿಸಿದ ಕಾಯ್ದೆಗಳನ್ನು ಕಡ್ಡಾಯವಾಗಿ ಪಾಲಿಸಿ ನಿಯಮಾನುಸಾರ ನಿರ್ವಹಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಈ ಕ್ಷಣದಿಂದಲೇ ಜಾರಿಗಳಿಸಲಾಗಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ(ಎಸ್) ಪಕ್ಷದ ನಾಯಕರು ರವರುಗಳಿಗೆ ಮಾಹಿತಿಗಾಗಿ ಕಳುಹಿಸಿಕೊಡಲು ಕೋರಿದೆ.
4. ವಿಶೇಷ ಆಯುಕ್ತರು (ಯೋಜನೆಗಳು) ರವರ ಮಾಹಿತಿಗಾಗಿ.
5. ಪ್ರಧಾನ ಅಭಿಯಂತರರು, ರವರ ಮಾಹಿತಿಗಾಗಿ.
6. ಅಪರ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ
7. ಅಪರ ಆಯುಕ್ತರು / ಜಂಟಿ ಆಯುಕ್ತರು (ಪೂರ್ವ / ಪಶ್ಚಿಮ / ದಕ್ಷಿಣ)/ ಬೊಮ್ಮನಹಳ್ಳಿ/ ಬ್ಯಾಟರಾಯನಪುರ/ ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಮುಖ್ಯ ಅಭಿಯಂತರರು (ಪೂರ್ವ / ಪಶ್ಚಿಮ / ದಕ್ಷಿಣ / ಬೊಮ್ಮನಹಳ್ಳಿ / ಬ್ಯಾಟರಾಯನಪುರ / ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಕಾನೂನು ಕೋಶದ ಮುಖ್ಯಸ್ಥರವರ ಮಾಹಿತಿಗಾಗಿ
11. ಮುಖ್ಯ ಲೆಕ್ಕ ಪರಿಶೋಧಕರವರ ಮಾಹಿತಿಗಾಗಿ
12. ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ಜಂಟಿ ನಿರ್ದೇಶಕರು (ನಗರ ಯೋಜನೆ – ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
15. ಸಲಹೆಗಾರರು (ಮಾಹಿತಿ ತಂತ್ರಜ್ಞಾನ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
16. ಕಛೇರಿ ಪ್ರತಿ